Answered on 29.03.2022 (22)

# ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪುಟ್ಟಣ್ಣ ರವರು ನಿಯಮ 330 ಅಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರಿಸುವ ಕುರಿತು

## ಸೂಚನೆ

ಖಾಸಗಿ ಅನುದಾನಿತ/ ಅನುದಾನರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ನವೀಕರಣ ನಿಯಮಗಳನ್ನು ಸರಳೀಕರಣಗೊಳಿಸುವ ಕುರಿತು.

## ಉತ್ತರ

ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 483/2004, ದಿನಾಂಕ: 13-04-2009ರ ತೀರ್ಪಿನನ್ವಯ ಶಾಲಾ ಕಟ್ಟಡವು ಸುರಕ್ಷಿತವಾಗಿದೆ ಮತ್ತು ಎಲ್ಲಾ ಕೋನಗಳಿಂದ ಸುಭದ್ರವಾಗಿದೆ ಎಂಬುದಾಗಿ ನ್ಯಾಷನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ ಇವರ ನಿಬಂಧನೆಗಳನ್ವಯ ಮಕ್ಕಳ ಸುರಕ್ಷತೆ ದೃಷ್ಠಿಯಿಂದ ಸುರಕ್ಷಿತವಾದ ಕಟ್ಟಡ ನಿರ್ಮಿಸಿರುವುದನ್ನು ಮಾನ್ಯತೆ ನೀಡುವ ಮೊದಲು ಖಚಿತ ಪಡಿಸಿಕೊಳ್ಳಬೇಕು ಎಂಬುದಾಗಿ ನಿರ್ದೇಶನ ನೀಡಿರುವುದರಿಂದ ಸರ್ಕಾರದ ಆದೇಶ ಸಂಖ್ಯೆ: ಇಡಿ 587 ಪಿಜಿಸಿ 2018 ದಿನಾಂಕ: 19-11-2018ರನ್ವಯ ಒಂದು ವರ್ಷದೊಳಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳುವ ಬಗ್ಗೆ ಸಂಬಂಧಪಟ್ಟ ಸಂಸ್ಥೆಗಳಿಗೆ ನೀಡಿದ ವಿನಾಯಿತಿಯ ಷರತ್ತನ್ನು ವಿಧಿಸಲಾಗಿರುತ್ತದೆ.

ಅದರಂತೆ, ಮಾನ್ಯತೆ ನೀಡಲು ಕ್ರಮ ವಹಿಸಬೇಕಾಗುತ್ತದೆ. ಆದಾಗ್ಯೂ, 2021-22ನೇ ಸಾಲಿನ ಎಸ್.ಎಸ್.ಎಲ್.ಸಿ. ಮಕ್ಕಳ ಪರೀಕ್ಷೆ ಮತ್ತು ಆರ್.ಟಿ.ಇ. ಶುಲ್ಕ ಮರುಪಾವತಿ ಮಾಡುವ ಸಂಬಂಧ, ಶಾಲಾ ಕಟ್ಟಡ ಸುರಕ್ಷತೆಗೆ ನಿಗಧಿಪಡಿಸಿದಂತೆ ಮುಖ್ಯ ದಾಖಲೆಗಳಾದ ಕಟ್ಟಡ ಸುರಕ್ಷತೆ ಮತ್ತು ಅಗ್ನಿ ಸುರಕ್ಷತಾ ಪ್ರಮಾಣ ಪತ್ರಗಳನ್ನು ತಕ್ಷಣ ಸಲ್ಲಿಸಲು ಸಾಧ್ಯವಾಗದಿದ್ದರೆ ನಂತರದಲ್ಲಿ ನೀಡುವಂತೆ ಮುಚ್ಚಳಿಕೆ ಪತ್ರ ಪಡೆಯುವ ಷರತ್ತಿಗೊಳಪಟ್ಟು ಪ್ರಸ್ತುತ ಶೈಕ್ಷಣಿಕ ವರ್ಷಕ್ಕೆ ಮಾತ್ರ ಮಾನ್ಯತೆ ನವೀಕರಣ ಮಾಡಲು ಮಾನ್ಯ ಮುಖ್ಯಮಂತ್ರಿಗಳು ಬೆಳಗಾವಿ ಅಧಿವೇಶನದ ಸಮಯದಲ್ಲಿ ಲೋಕೋಪಯೋಗಿ ಇಲಾಖೆ, ಗೃಹ ಇಲಾಖೆ, ಹಾಗೂ ಮಾನ್ಯ ಸಭಾಪತಿಗಳು ಹಾಗೂ ಪರಿಷತ್ ಸದಸ್ಯರೊಂದಿಗೆ ಚರ್ಚಿಸಿ ನಿರ್ದೇಶಿಸಿದಂತೆ ಕ್ರಮವಹಿಸಲಾಗುತ್ತಿದೆ.

2021-22 ಸಾಲಿನಿಂದ ಆನ್‌ಲೈನ್ ತಂತ್ರಾಂಶದ ಮೂಲಕ ಮಾನ್ಯತೆಯನ್ನು ನವೀಕರಿಸುತ್ತಿದೆ. ಅಗತ್ಯ ಮಾಹಿತಿಗಳನ್ನು ಶಾಲೆಗಳು/ಸಂಸ್ಥೆಗಳು ಈಗಾಗಲೇ ಎಸ್.ಎ.ಟಿ.ಎಸ್ ತಂತ್ರಾಂಶದಲ್ಲಿ ದಾಖಲಿಸಿರುವ ಮಾಹಿತಿಗಳನ್ನು ಪಡೆದುಕೊಂಡು ಅಗತ್ಯವಿರುವ ಹೆಚ್ಚುವರಿ/ನವೀಕೃತ ದಾಖಲೆಗಳನ್ನು ಮಾತ್ರ ಸಲ್ಲಿಸಲು ಅವಕಾಶ ಕಲ್ಪಿಸಿದೆ.

2020-21 ಕ್ಕಿಂತ ಹಿಂದೆ ಸುಮಾರು 64 ದಾಖಲೆಗಳನ್ನು ಸಲ್ಲಿಸಬೇಕಾಗಿತ್ತು ಈಗ ದಾಖಲೆಗಳ ಸಂಖ್ಯೆಯನ್ನು ಕಡಿತಗೊಳಿಸಿದ್ದು, ಪ್ರಸ್ತುತ 21 ದಾಖಲೆಗಳನ್ನು ಅಳವಡಿಸಬೇಕಿದೆ. ಈ ದಾಖಲೆಗಳಲ್ಲಿ SATS ತಂತ್ರಾಂಶದಲ್ಲಿ ಲಭ್ಯವಿರುವ ದಾಖಲೆಗಳನ್ನು ಮತ್ತೆ ಆನ್‌ಲೈನ್‌ನಲ್ಲಿ ಸಲ್ಲಿಸುವ ಅಗತ್ಯ ಇರುವುದಿಲ್ಲ. ಪ್ರಸ್ತುತ ವರ್ಷದಿಂದ ಆನ್‌ಲೈನ್ ತಂತ್ರಾಂಶದ ಮೂಲಕ ಮಾನ್ಯತೆ ನವೀಕರಣವನ್ನು ಮಾಡಲಾಗುತ್ತಿದ್ದು, ಯಾವುದಾದರೂ ಆಡಳಿತ ಮಂಡಳಿಗಳು ಅಪೂರ್ಣ ಅರ್ಜಿಗಳನ್ನು ಹಾಕಿದ್ದಲ್ಲಿ ಪುನರ್ ಸರಿಪಡಿಸಿ ಸಲ್ಲಿಸಲು ಉಪನಿರ್ದೇಶಕರ ಹಂತದಲ್ಲಿ ಆನ್‌ಲೈನ್‌ನಲ್ಲಿ ಅವಕಾಶ ನೀಡುವುದರೊಂದಿಗೆ ಸರಳೀಕರಣಗೊಳಿಸಿದೆ.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ವ್ಹಿ. ಸಂಕನೂರ ಇವರ ಅಧ್ಯಕ್ಷತೆಯಲ್ಲಿ ಕಟ್ಟಡ ಸುರಕ್ಷತೆ ಮತ್ತು ಅಗ್ನಿ ಸುರಕ್ಷತೆಗೆ ಸಂಬಂಧಪಟ್ಟಂತೆ ಸಲ್ಲಿಸಲಾದ ವರದಿಯನ್ನು ಹಾಗೂ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನನ್ವಯ ಪರಿಶೀಲಿಸಿ, ಸರಳೀಕರಣಗೊಳಿಸಲು ಸಂಬಂಧಪಟ್ಟ ಇಲಾಖೆಗಳಿಗೆ ನಿರ್ದೇಶನ ನೀಡಲಾಗಿದೆ. ಈ ಸಂಬಂಧ ಮಾನ್ಯ ಶಿಕ್ಷಣ ಸಚಿವರು ಬೆಳಗಾವಿ ಅಧಿವೇಶನ ಸಮಯದಲ್ಲಿ ಹಾಗೂ ಬೆಂಗಳೂರಿನ ವಿಧಾನಸೌಧದ ಸಚಿವರ ಕಛೇರಿಯಲ್ಲಿ ಮೂರು ಬಾರಿ ಸಭೆ ನಡೆಸಿ, ಕಟ್ಟಡ ಮತ್ತು ಅಗ್ನಿ ಸುರಕ್ಷತಾ ಪ್ರಮಾಣಪತ್ರ ವಿತರಿಸುವ ಪ್ರಕ್ರಿಯೆಯಲ್ಲಿ ಗಣನೀಯವಾಗಿ ಸರಳೀಕರಣಗೊಳಿಸಲು ಚರ್ಚಿಸಿ, ನಿರ್ಣಯಿಸಿದೆ. ಇಂದು ದಿನಾಂಕ:17.03.2022 ರಂದು ಮುಖ್ಯಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಅಗ್ನಿಶಾಮಕ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಿ ಇಲಾಖೆ ಸೂಚಿಸಿರುವಂತೆ ಎಲ್ಲಾ ಶಾಲೆಗಳು ಪ್ರಮಾಣ ಪತ್ರ ಪಡೆಯಲು ಅನುಕೂಲವಾಗುವಂತೆ ಚರ್ಚಿಸಿದ್ದು, ಸರಳೀಕರಿಸಲು ಕ್ರಮವಹಿಲಾಗುತ್ತಿದೆ.

**ಇಪಿ 67 ಪಿಜಿಸಿ 2022**

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ
ಸಚಿವರು